# ಭೂತಾನ್ ಪ್ರಧಾನ ಮಂತ್ರಿಯೊಂದಿಗೆ ಪ್ರಧಾನ ಮಂತ್ರಿಯ ದ್ವಿಪಕ್ಷೀಯ ಸಭೆ ಮತ್ತು ತಿಳುವಳಿಕಾ ಒಪ್ಪಂದಗಳ ವಿನಿಮಯ

ಮಾರ್ಚ್ 22, 2024

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಥಿಂಪುವಿನಲ್ಲಿ ಭೂತಾನ್‌ನ ಪ್ರಧಾನ ಮಂತ್ರಿ  ಮಾನ್ಯ ತ್ಶೆರಿಂಗ್ ಟೊಬ್ಗೇ ಅವರ ಗೌರವಾರ್ಥವಾಗಿ ಮಧ್ಯಾಹ್ನದ ಭೋಜನ ಆಯೋಜಿಸಿದ್ದರು. ಪಾರೊದಿಂದ ಥಿಂಪುವಿನವರೆಗಿನ ಪ್ರಯಾಣದ ಉದ್ದಕ್ಕೂ ಜನರು ಅವರನ್ನು ಸ್ವಾಗತಿಸುವುದರೊಂದಿಗೆ, ತಮಗೆ ನೀಡಿದ ಅಸಾಧಾರಣ ಸಾರ್ವಜನಿಕ ಸ್ವಾಗತಕ್ಕಾಗಿ ಪ್ರಧಾನಮಂತ್ರಿ ಟೋಬ್ಗೇ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

2. ಉಭಯ ನಾಯಕರು ಬಹುಮುಖಿ ದ್ವಿಪಕ್ಷೀಯ ಸಂಬಂಧಗಳ ವಿವಿಧ ಅಂಶಗಳ ಕುರಿತು ಚರ್ಚೆ ನಡೆಸಿದರು ಮತ್ತು ನವೀಕರಿಸಬಹುದಾದ ಇಂಧನ, ಕೃಷಿ, ಯುವ ವಿನಿಮಯ, ಪರಿಸರ ಮತ್ತು ಅರಣ್ಯ ಮತ್ತು ಪ್ರವಾಸೋದ್ಯಮದಂತಹ ವಲಯಗಳಲ್ಲಿ ಸಹಕಾರವನ್ನು ಇನ್ನಷ್ಟು ಹೆಚ್ಚಿಸಲು ತಿಳುವಳಿಕೆಯನ್ನು ರೂಪಿಸಿದರು. ಭಾರತ ಮತ್ತು ಭೂತಾನ್ ಎಲ್ಲಾ ಹಂತಗಳಲ್ಲಿ ಅತ್ಯಂತ ನಂಬಿಕೆ, ಸದ್ಭಾವನೆ ಮತ್ತು ಪರಸ್ಪರ ತಿಳುವಳಿಕೆಯಿಂದ ನಿರೂಪಿಸಲ್ಪಟ್ಟ ದೀರ್ಘಕಾಲದ ಮತ್ತು ಅಸಾಧಾರಣ ಸಂಬಂಧಗಳನ್ನು ಆನಂದಿಸುತ್ತವೆ.

3. ಸಭೆಯ ಮೊದಲು, ಪ್ರಧಾನಿ ಮೋದಿ ಮತ್ತು ಭೂತಾನ್ ಪ್ರಧಾನ ಮಂತ್ರಿಗಳು ಇಂಧನ, ವ್ಯಾಪಾರ, ಡಿಜಿಟಲ್ ಸಂಪರ್ಕ, ಬಾಹ್ಯಾಕಾಶ, ಕೃಷಿ, ಯುವಜನರ ಸಂಪರ್ಕದ ಕುರಿತು ಹಲವಾರು ತಿಳುವಳಿಕಾ ಒಪ್ಪಂದಗಳು/ಒಪ್ಪಂದಗಳ ವಿನಿಮಯಕ್ಕೆ ಸಾಕ್ಷಿಯಾದರು.

https://bit.ly/3xa8U7y

**ಥಿಂಪು**
**ಮಾರ್ಚ್ 22, 2024**